SRI B. B. SAYANAK.—No Sir, he said that the matter is under examination. I want to know when you are going to take action against this panchayat ?

SRI B RAMAIAH.—I have clearly stated that there are certain procedures to be followed. We are following them. The moment I get this report, favourable or not, I will consider. It is not easy to order from here for supersession I must follow certain procedures.

Acquisition of land for the Construction of Bus Stand at Kunigal.

363. SRI D.T. MAYANNA (Huliyurdurga).—Will the Minister for Transport and Minor Irrigation, be pleased to state :—

(a) the number of years passed, and the number of acres of land acquired and taken possession for the construction of administrative building, bus stand in Kunigal, Tumkur district by K.S.R.T.C.;

(b) the amount of income received by the Government and the K.S.R.T.C. from the trees on this land every year;

(c) the number of days required by the K.S.R.T.C. to construct the administrative office building and bus stand ?

SRI M. M. J. SADYOJATHA (Minister for Transport and Minor Irrigation).—

(a) The Karnataka State Road Transport Corporation has taken possession of 4 acres of land on 17th March 1969.

(b)

Year		Income
1970		No income
From November 1970 to March 1972	...	245-00
During 1972-73	...	655-00
During 1973-74	...	655-00
During 1974-75	...	1,050-00
From April to November 1975	...	No income on account of stay order from the Court.

From December 1975 to December 1976		1,070-00
From January 1977 to March	...	267-48
(At the above rate. income for 3 months has been received).		
1977-78	...	1,550-00
1978-79	...	1,025-00
1979-80	...	1,628-00
1980-81	...	2,620-00

(c) After nationalisation of transport. it is proposed to construct the bus depot in the said site.

ಶ್ರೀ ಡಿ.ಟಿ. ಮಾಯಣ್ಣ.—೧೭-೩-೭೯ರಲ್ಲಿ ಅಕ್ವೈರ್ ಮಾಡಿಕೊಂಡ ೪ ಎಕರೆ ಜಮೀನಿಗೆ ಕೊಟ್ಟ ಪರಿಹಾರ ಧನ ಎಷ್ಟು ?

†ಶ್ರೀ ಎಂ.ಎಂ.ಜೆ. ಸದ್ಯೋಜಾತ.—೯೯೦ ರೂಪಾಯಿಗಳು.

ಶ್ರೀ ಡಿ.ಟಿ. ಮಾಯಣ್ಣ.—ಅದು ತೆಂಗಿನ ತೋಟವಾದ್ದರಿಂದ ಅದರಲ್ಲಿ ೨೪೫ ರೂಪಾಯಿನಿಂದ ೨ ಸಾವಿರ ಚಿಲ್ಲರೆವರೆಗೆ ವರಮಾನ ಇದೆ ಎಂದು ಹೇಳಿದ್ದೀರಿ. ಅದನ್ನು ಹರಾಜು ಮೂಲಕ ಪಡೆಯುತ್ತೀರಾ ಅಥವಾ ಹೇಗೆ ಪಡೆಯುತ್ತೀರಿ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಹರಾಜು ಮಾಡಿ ಹಣ ಪಡೆಯುತ್ತಿದ್ದೇವೆ.

ಶ್ರೀ ಡಿ.ಟಿ. ಮಾಯಣ್ಣ.—ಸನ್ನ (೧) ಪ್ರಶ್ನೆಗೆ ಉತ್ತರವಾಗಿ ಸಾರಿಗೆ ರಾಷ್ಟ್ರೀಕರಣವಾದ ಮೇಲೆ ಬಸ್ ನಿಲ್ದಾಣವನ್ನು ಕಟ್ಟುತ್ತೇವೆಂದು ಹೇಳಿದ್ದೀರಿ. ಆದರೆ ಇವತ್ತು ಅಲ್ಲಿ ಸರಿಯಾದ ಬಸ್ ನಿಲ್ದಾಣ ಇಲ್ಲದೆ ಬಹಳ ತೊಂದರೆಯಾಗಿದೆ. ಆದ್ದರಿಂದ, ಯಾವಾಗ ರಸ್ತೆಗಳನ್ನು ರಾಷ್ಟ್ರೀಕರಣ ಮಾಡಿ ಬಸ್ ನಿಲ್ದಾಣವನ್ನು ಕಟ್ಟುತ್ತೀರಿ ? ಬೆಂಗಳೂರು–ಮಂಗಳೂರು ರಸ್ತೆ ರಾಷ್ಟ್ರೀಕರಣವಾಗಿದೆಯಲ್ಲವೆ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ರಾಷ್ಟ್ರೀಕರಣ ಮಾಡುವ ಯೋಜನೆ ಸರ್ಕಾರದ ಮುಂದಿಲ್ಲ.

ಶ್ರೀ ಡಿ.ಟಿ. ಮಾಯಣ್ಣ.—ನೀವು ಡಿಪೋ ಕಟ್ಟಬೇಕಾದರೆ ರಾಷ್ಟ್ರೀಕರಣ ಮಾಡಿದ ಮೇಲೆ ಕಟ್ಟುತ್ತೇವೆಂದು ಹೇಳುತ್ತೀರಿ. ಹಾಗಾದರೆ ಯಾವುದನ್ನು ರಾಷ್ಟ್ರೀಕರಣ ಮಾಡುತ್ತೀರಿ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಪೂರ್ಣ ಆಗಿಲ್ಲವೆಂದು ಹೇಳಿರುವುದು.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಜಿಲ್ಲೆಯಲ್ಲಿ ಪೂರ್ಣ ಆಗಿಲ್ಲದೆ ಇರಬಹುದು. ಬೆಂಗಳೂರು–ಮಂಗಳೂರು ರಸ್ತೆ ರಾಷ್ಟ್ರೀಕರಣ ಆಗಿದೆ. ಅಲ್ಲಿ ಖಾಸಗೀ ಬಸ್ಸುಗಳನ್ನು ಆಲೋ ಮಾಡುತ್ತಿಲ್ಲ. ೧೯೭೯ರಲ್ಲೇ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಸುಮ್ಮನೆ ಇಟ್ಟುಕೊಳ್ಳುವುದು ಸರಿಯಲ್ಲ. ಮುಂದೆ ರಾಷ್ಟ್ರೀಕರಣ ಮಾಡುತ್ತೀರಾ ? ಈಗ ಡಿಪೋ ಕಟ್ಟುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಆ ಯೋಜನೆ ಸರ್ಕಾರದ ಮುಂದಿಲ್ಲ. ಆದರೆ ಯೋಗ್ಯ ಕಾಲದಲ್ಲಿ ಪರಿಶೀಲನೆ ಮಾಡಿಸುತ್ತೇನೆ. ತುಮಕೂರು ಜಿಲ್ಲೆ ರಾಷ್ಟ್ರೀಕರಣವಾಗಿಲ್ಲವೆಂದು ಮಾಹಿತಿ ಇದೆ. ತುಮಕೂರು ಜಿಲ್ಲೆ ರಾಷ್ಟ್ರೀಕರಣವಾದ ನಂತರ ಈ ಯೋಜನೆಯನ್ನು ಕೈಗೊಳ್ಳಲಾಗುವುದು.

† Indicates that the remarks or speeches have not been revised by the member concerned.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಹಾಗಾದರೆ ಯಾವಾಗ ಅದು ರಾಷ್ಟ್ರೀಕರಣವಾಗುತ್ತದೆ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಸಧ್ಯಕ್ಕೆ ಆ ಯೋಜನೆ ಸರ್ಕಾರದ ಮುಂದಿಲ್ಲ.

Fire Accident in Afzalpur Taluk.

515. SRI M.Y. PATIL (Afzalpur).—Will the Minister for Revenue be pleased to state :—

(a) whether it has come to the notice of Government that a house and 3 people where burnt alive due to fire accident occured in Mashala village of Afzalpur taluk six months back;

(b) if so, the kind of compensation extended to them ?

SRI MALLIKARJUNA M. KHARGE (Minister for Revenue).—

(a) Yes.

(b) A sum of Rs. 3,735 towards compensation and building materials worth of Rs. 1,560 have been sanctioned.

ಶ್ರೀ ಎಂ. ವೈ. ಪಾಟೀಲ್.—ಅಫ್ಜಲ್‌ಪುರ ತಾಲ್ಲೂಕಿನಲ್ಲಿ ಬರುವ ಮಾಶಾಳ ಗ್ರಾಮದಲ್ಲಿ ೬ ತಿಂಗಳ ಹಿಂದೆ ಬೆಂಕಿ ಅನಾಹುತಕ್ಕೆ ಸಿಕ್ಕಿ ಮನೆ ಹಾಗೂ ೩ ಜನ ದಹನವಾದ ವಿಚಾರವನ್ನು ಸರ್ಕಾರ ಒಪ್ಪಿದೆ. ಅದಕ್ಕೆ ಪರಿಹಾರ ಒದಗಿಸುವಾಗ, ನಾನು ಪ್ರಶ್ನೆ ಕೇಳಿದ ಮೇಲೆ ಒದಗಿಸಿದರೋ ಅಥವಾ ಕೂಡಲೇ ಒದಗಿಸಿದರೋ ?

† ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸುದ್ದಿ ಬಂದಕೂಡಲೇ ಪರಿಹಾರವನ್ನು ಒದಗಿಸಿದೆವು. ೭-೪-೧೯೮೦ರಲ್ಲಿ ಈ ಘಟನೆ ನಡೆಯಿತು. ಅದರ ಮರುದಿನವೇ ತಹಶೀಲ್ದಾರರು ಸ್ಥಳಕ್ಕೆ ಹೋಗಿ ವರದಿ ಕೊಟ್ಟ ಕೂಡಲೇ ಕೊಡಲಾಯಿತು. ಅಂದರೆ ಅವರಿಗೆ ೩೦೦ ರೂಪಾಯಿಗಳನ್ನು ಕೊಡುವ ಅಧಿಕಾರ ಇತ್ತು, ಅಂತೆಯೇ ಅವರು ತಕ್ಷಣ ಕೊಟ್ಟರು. ಉಳಿದ ಪರಿಹಾರವನ್ನು ಕೊಡಲು ಅಸಿಸ್ಟೆಂಟ್ ಕಮೀಷನರ್ ಮತ್ತು ಡೆಪ್ಯುಟಿ ಕಮೀಷನರ್‌ರವರಿಗೆ ಅಧಿಕಾರ ಇದೆ, ಅದೇ ಪ್ರಕಾರ ಅವರೂ ಕೂಡ ಕೊಟ್ಟಿದ್ದಾರೆ. ಮಲ್ಲಪ್ಪ ಮತ್ತು ನಿಂಗಪ್ಪ ಎಂಬುವವರು ಏನು ತೀರಿಕೊಂಡು ಹೋಗಿದ್ದಾರೆ ಅವರಿಗೆ ಮುಖ್ಯ ಮಂತ್ರಿಗಳ ನಿಧಿಯಿಂದ ಪ್ರತಿಯೊಬ್ಬರಿಗೆ ೧೫೦೦ ರೂಪಾಯಿ ಕೊಟ್ಟಿದ್ದೇವೆ.

ಶ್ರೀ ಎಂ.ವೈ. ಪಾಟೀಲ್.—ಪರಿಹಾರ ಕೊಡುವಾಗ ಯಾವ ನೀತಿಯನ್ನು ಅನುಸರಿಸುತ್ತೀರಿ ? ಹಳ್ಳಿಯಲ್ಲಿ ಸತ್ತರೆ ಬೇರೆ, ಪಟ್ಟಣದಲ್ಲಿ ಸತ್ತರೆ ಬೇರೆ, ಪರಿಜನ ಸತ್ತರೆ ಬೇರೆ, ಮೇಲ್ವರ್ಗದವರು ಸತ್ತರೆ ಬೇರೆ ರೀತಿ ಕೊಡಬೇಕೆಂಬ ನೀತಿ ಇದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹಾಗೆ ಏನು ಇಲ್ಲ. ಬೆಂಕಿ ಅಪಘಾತ ಸಂಭವಿಸಿದಾಗ ಕೆಲವು ನಿಯಮಗಳನ್ನು ಅನುಸರಿಸಬೇಕೆಂದು ಮಾಡಿದ್ದೇವೆ. ಆ ಪ್ರಕಾರ ತಹಶೀಲ್ದಾರರು ೩೦೦ ರೂಪಾಯಿಗಳನ್ನೂ, ಅಸಿಸ್ಟೆಂಟ್ ಕಮೀಷನರ್‌ರವರು ೫೦೦ ರೂಪಾಯಿಗಳನ್ನೂ ಹಾಗೂ ಜಿಲ್ಲಾಧಿಕಾರಿಗಳು ೮೦೦ ರೂಪಾಯಿಗಳವರೆಗೆ ಅಂದರೆ ಎಷ್ಟು ನಷ್ಟವಾಗಿರುತ್ತದೋ ಅದನ್ನು ನೋಡಿಕೊಂಡು ಕೊಡುವುದಕ್ಕೆ ಬರುತ್ತದೆ. ಯಾವುದೇ ಜಾತಿಯವನಿರಲಿ ಆಗಿರತಕ್ಕ ನಷ್ಟವನ್ನು ನೋಡಿಕೊಂಡು ಕೊಡುತ್ತಾರೆ. ಆ ಜಾತಿಗೇ ಕೊಡಬೇಕು, ಈ ಜಾತಿಗೆ ಕೊಡಬಾರದೆಂಬ ನಿಯಮ ಇಲ್ಲ.

ಶ್ರೀ ಎಂ.ವೈ. ಪಾಟೀಲ್.—ಇಲ್ಲಿ ಪ್ರಾಣ ಹಾನಿಯಾಗಿದೆ. ೩ ಜನ ಸತ್ತಿದ್ದಾರೆಂಬುವನ್ನು ತಾವೇ ಒಪ್ಪಿಕೊಂಡಿದ್ದೀರಿ. ಪರಿಹಾರ ಕೊಡುವಾಗ, ಸರ್ಕಾರ್‌ನಲ್ಲಿ ಸತ್ತವರಿಗೆ ೫ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇದನ್ನು ನೋಡಿದರೆ ಹಳ್ಳಿಯಲ್ಲಿ ಸತ್ತವರಿಗೆ ಯಾವ ಧೋರಣೆಯನ್ನು ಅನುಸರಿಸಿದ್ದಾರೆಂಬುದು ಗೊತ್ತಾಗುತ್ತದೆ.